**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
<u>ಸಿ.ಸಿ.ನಂ.**1138/2025**</u>

ದಿನಾಂಕ: **05.05.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ತೇಜ್ ಕುಮಾರ್ | ಚಾಸಾ-2, ಪ್ರಾಸ-3 |
| ತಂದೆಯ ಹೆಸರು | ಮೈಲಾರಪ್ಪ | |
| ವಯಸ್ಸು | 27 ವರ್ಷ | |
| ಉದ್ಯೋಗ | ಖಾಸಗಿ ಬ್ಯಾಂಕ್ ನೌಕರ | |
| ವಾಸ | ಬೀರೂರು | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ಮೃತ ವ್ಯಕ್ತಿ ನನಗೆ ಗೊತ್ತು. ನಾನು ಅಪಘಾತವನ್ನು ಖುದ್ದಾಗಿ ನೋಡಿಲ್ಲ. ಸುಮಾರು ಒಂದು ವರ್ಷದ ಹಿಂದೆ ಸಂಜೆ 6.00 ಗಂಟೆ ಸಮಯಕ್ಕೆ ನಾನು ಕೆಲಸ ಮುಗಿಸಿಕೊಂಡು ಮನೆ ಕಡೆ ಹೋಗುವಾಗ ಆಕಾಶ್ ರವರು ಅಪಘಾತಕ್ಕೊಳಗಾಗಿ ಹಿರಿಯಂಗಳ ರಸ್ತೆಯಲ್ಲಿ ಅಪಘಾತಕ್ಕೊಳಗಾಗಿ ಬೈಕ್ ಸಮೇತ ಕೆಳಗಡೆ ಬಿದ್ದಿದ್ದರು. ಈ ವಿಚಾರವನ್ನು ನಾನು ಚಾಸಾ-1 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿ ನಾನು ಸ್ಥಳದಿಂದ ಹೋಗಿರುತ್ತೇನೆ. ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ನಂತರ ಆಕಾಶ್ ರವರು ಅಪಘಾತದಿಂದ ಮರಣ ಹೊಂದಿರುತ್ತಾರೆ ಎಂದು ನನಗೆ ತಿಳಿಯಿತು. ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ನನಗೆ ಗೊತ್ತಿಲ್ಲ. ಈ ವಿಚಾರವಾಗಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀಸವಾಲು: ಮಾನ್ಯ ಸಸಅ. ರವರಿಂದ ಃ</u>

ದಿ: 29.04.2024 ರಂದು ಹೆಳವರಹಟ್ಟಿ ಗ್ರಾಮಕ್ಕೆ ಹಣ ಕಲೆಕ್ಷನ್ ಗೆ ಹೋಗಿ ಸಂಜೆ 6.30 ಗಂಟೆ ಸಮಯಕ್ಕೆ ಬೀರೂರಿನ ಮುದ್ದಪ್ಪ ಏರಿಯಾ ರಸ್ತೆಯಲ್ಲಿ ನಾನು ಹೋಗುತ್ತಿದ್ದ ಬೈಕಿನ ಮುಂದೆ ಹಸಿರು ಬಣ್ಣದ ಟ್ರಾಕ್ಟರನ್ನು ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಅತಿವೇಗವಾಗಿ ಚಲಾಯಿಸಿಕೊಂಡು ಹೋಗಿ ಎದುರುಗಡೆಯಿಂದ ಬರುತ್ತಿದ್ದ ಬೈಕಿಗೆ ಏಕಾಏಕಿ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಪರಿಣಾಮವಾಗಿ ಬೈಕ್ ಸವಾರ ಬೈಕ್ ಸಮೇತ ಕೆಳಗಡೆ ಬಿದ್ದಿರುತ್ತಾನೆ ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದಾಗ ಬೈಕ್ ಸವಾರನ ಹೆಸರು ಆಕಾಶ್ ಆತನ ತಲೆಗೆ, ಮುಖಕ್ಕೆ, ಕೈ ಕಾಲುಗಳಿಗೆ ತೀವ್ರ ಗಾಯವಾಗಿತ್ತು ಎಂದರೆ ಸರಿ. ಆತನಿಗೆ ಅಪಘಾತವಾಗಿರುವ ವಿಚಾರವನ್ನು ಚಾಸಾ-1

ರವರಿಗೆ ದೂರವಾಣಿ ಮೂಲಕ ತಿಳಿಸಿರುತ್ತೇನೆ ಎಂದರೆ ಸರಿ. ನಂತರ ನಾನು ಅಂಬುಲೆನ್ಸ್‌ಗೆ ಕರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ವಲ್ಪ ಹೊತ್ತಿನ ನಂತರ ಅಲ್ಲಿಗೆ ಚಾಸಾ-7, 8 ಮತ್ತು 12 ರವರು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವುಗಳು ಆತನನ್ನು ಅಂಬುಲೆನ್ಸ್‌ನ ಮೂಲಕ ಬೀರೂರಿನ ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಆಕಾಶ್ ರವರನ್ನು ಶಿವಮೊಗ್ಗ ಆಸ್ಪತ್ರೆಗೆ ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಕಾಶ್ ರವರು ಚಿಕಿತ್ಸೆ ಫಲಕಾರಿಯಾಗದೇ ಮರಣಹೊಂದಿರುವ ವಿಚಾರ ನನಗೆ ಗೊತ್ತು. ದಿಃ 28.10.2024 ರಂದು ನಾನು ಬೀರೂರು ವೃತ್ತ ನಿರೀಕ್ಷಕರ ಕಛೇರಿಯಲ್ಲಿ 1 ನೇ ಆರೋಪಿಯನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ದಿಃ 28.10.2024 ರಂದು ನನಗೆ ಈಗ ಓದಿ ಹೇಳಿ ತಿಳಿಸಿರುವಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದ ಃಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.